# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಶೆಟ್ಟಿಹಳ್ಳಿ ಉಪವಿಭಾಗ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಹತ್ತಿರ, ರವೀಂದ್ರನಗರ, ಶೆಟ್ಟಿಹಳ್ಳಿ ಕ್ರಾಸ್.

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ದಾಸರಹಳ್ಳಿ ವಲಯದ ವಾರ್ಡ್ ಸಂಖ್ಯೆ 12 ರಲ್ಲಿ ದಿನಾಂಕ:- 25.11.2021 ರಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿ.**

ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ.

1. ಶ್ರೀ ರವಿಕುಮಾರ್, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
2. ಶ್ರೀ ಕೃಷ್ಣಮೂರ್ತಿ ಎಸ್.ಎನ್, ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿಗಳು.
3. ಶ್ರೀ ನಾಗಭೂಷಣ್, ಮಾಜಿ ಬಿಬಿಎಂಪಿ ಸದಸ್ಯರು, ವಾರ್ಡ್ ನಂ.12 ಶೆಟ್ಟಿಹಳ್ಳಿ.
4. ಶ್ರೀ ದೇವೇಗೌಡ್ರು, ಸದಸ್ಯರು, ವಾರ್ಡ್ ನಂ.12.
5. ಶ್ರೀ ಕೆಂಪೋಬಳಯ್ಯ, ಸದಸ್ಯರು, ವಾರ್ಡ್ ನಂ.12.
6. ಶ್ರೀಮತಿ ನಾಗವೇಣಿ, ಸದಸ್ಯರು, ವಾರ್ಡ್ ನಂ.12.
7. ಶ್ರೀ ಮಂಜುನಾಥ್‌ಗೌಡ, ಪಶುಪಾಲನಾ ಇಲಾಖೆ, ವಾರ್ಡ್ ನಂ.12.
8. ಶ್ರೀ ಮಂಜುನಾಥ್, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.12.
9. ಶ್ರೀ ಸಿದ್ದರೆಡ್ಡಿ ಕೆ.ಎ, ಕಿರಿಯ ಆರೋಗ್ಯ ನಿರೀಕ್ಷಕರು, ಪಿ.ಹೆಚ್.ಸಿ, ಅಬ್ಬಿಗೆರೆ.
10. ಶ್ರೀ ಚಂದ್ರಮೋಹನ್, ವಾಟರ್‌ಇನ್ಸ್‌ಪೆಕ್ಟರ್, ಬಿ.ಡಬ್ಲ್ಯೂಎಸ್.ಎಸ್.ಬಿ.
11. ಶ್ರೀ ಸುರೇಶ್, ಕಿ.ಆ.ಪ, ವಾರ್ಡ್ ನಂ.12.
12. ಶ್ರೀ ಜೆ. ಸಾಗರ್, ಅಸೆಸ್ಸರ್, ವಾರ್ಡ್ ನಂ.12.
13. ಶ್ರೀ ಸಂಜೀವಪ್ಪ, ಅರಣ್ಯ ಇಲಾಖೆ, ದಾಸರಹಳ್ಳಿ ವಲಯ.
14. ಶ್ರೀ ಗಣೇಶ್ ಟಿ, ಬಿಬಿಎಂಪಿ ಮಾರ್ಷಲ್.
15. ಶ್ರೀ ಜಯರಾಂ .ಎಂ.ಎಸ್, ನೀ.ಸ.ಸ. ವಾರ್ಡ್ ನಂ.12

ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ನಡೆಸಲು ವಾರ್ಡ್ ಸಮಿತಿ ಅಧ್ಯಕ್ಷರನ್ನು ಕೋರಲಾಯಿತು.

**1) ಮಾನ್ಯ ಅಧ್ಯಕ್ಷರ ಅಪ್ಪಣೆಯ ಮೇರೆಗೆ ದಿನಾಂಕ: 25.11.2021 ರಂದು ಚರ್ಚಿಸಿರುವ ವಿಚಾರಗಳು.**

| ಕ್ರ ಸಂ | ವಿಷಯ ಸೂಚಿ | ಚರ್ಚಿಸಿದ ವ್ಯಕ್ತಿಯ ಹೆಸರು ಮತ್ತು ದೂರವಾಣಿ ಸಂಖ್ಯೆ | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|---|
| 1 | ಮೇದರಹಳ್ಳಿ 4 ಮತ್ತು 6ನೇ ಅಡ್ಡರಸ್ತೆಗೆ ಸ್ಯಾನಿಟರಿ ಲೈನ್ ಹಾಕಿಲ್ಲವೆಂದು ದೂರು ನೀಡಿದರು | ಸಾರ್ವಜನಿಕರು | ಸ್ಯಾನಿಟರಿ ಲೈನ್ ಕಾಮಗಾರಿ ಪ್ರಗತಿಯಲ್ಲಿದ್ದು, ಮುಂದುವರೆದು, ಈ ಲೈನ್ ಅನ್ನು ಕನೆಕ್ಟ್ ಮಾಡಲು ಸ್ವಲ್ಪ ಅಡಚಣೆ ಇದ್ದು ಸರಿಪಡಿಸಿಕೊಂಡು ಕಾಮಗಾರಿ ಮುಂದುವರೆಸುವುದು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ವಿಭಾಗ |

| | | | | |
|---|---|---|---|---|
| 2 | ಫ್ಲೈಓವರ್ ಗೆ ಸಂಬಂಧಪಟ್ಟಂತೆ ರಸ್ತೆಯ ಬಗ್ಗೆ ದೂರನ್ನು ಸ್ವೀಕರಿಸಲಾಯಿತು. | ಶ್ರೀ ರಾಮಂಜನಪ್ಪ | ಈ ರಸ್ತೆಯಲ್ಲಿ ಈಗಾಗಲೇ ಬೆಟ್‌ಮಿಕ್ಸ್ ಅನ್ನು ಹಾಕಿ ಹಳ್ಳಗಳನ್ನು ಸಮತಟ್ಟು ಮಾಡಲಾಗಿದೆ. | ಸಹಾಯಕ ಕಾರ್ಯಪಾಲಕ ಅಭಿಯಂತರರು ಶೆಟ್ಟಿಹಳ್ಳಿ ವಿಭಾಗ |
| 3 | ಪಾರ್ಕ್‌ಗೆ ಸಂಬಂಧಪಟ್ಟಂತೆ ಸೆಕ್ಯೂರಿಟಿ ಹಾಗೂ ಫೆನ್ಸಿಂಗ್ ಅನ್ನು ಹಾಕಿಸಿಕೊಡಬೇಕೆಂದು ಕೋರಿದರು | ಸಾರ್ವಜನಿಕರು | ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗೆ ತಿಳಿಸಲಾಯಿತು. ಫೆನ್ಸಿಂಗ್ ಅನ್ನು ಶ್ರೀ ದೇವೇಗೌಡರವರು ಮೇಜರ್ ರೋಡ್ ರವರೊಂದಿಗೆ ಚರ್ಚಿಸಿ ಮಾಡಿಸಿಕೊಡುವುದಾಗಿ ತಿಳಿಸಿದರು | ತೋಟಗಾರಿಕೆ ಇಲಾಖೆ ದಾಸರಹಳ್ಳಿ ವಲಯ |
| 4 | ಅಬ್ಬಿಗೆರೆ ಕೆರೆಕೋಡಿಗೆ ಬ್ರಿಡ್ಜ್ ಮಾಡಿಸಿಕೊಡಬೇಕೆಂದು ಕೋರಿದರು | ಶ್ರೀ ರಾಮಂಜನಪ್ಪ | ಈ ವಿಷಯವಾಗಿ ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ ತಿಳಿಸುವುದಾಗಿ ಹೇಳಲಾಯಿತು | ಸಹಾಯಕ ಕಾರ್ಯಪಾಲಕ ಅಭಿಯಂತರರು ಶೆಟ್ಟಿಹಳ್ಳಿ ವಿಭಾಗ |
| 5 | ಸ್ಮಶಾನದ ರಾಜಕಾಲುವೆಗೆ ಬ್ರಿಡ್ಜ್ ಮಾಡಿಸಬೇಕೆಂದು ಕೋರಿದರು. | ಶ್ರೀ ರಾಮಂಜನಪ್ಪ | ಈ ವಿಷಯವಾಗಿ ಚರ್ಚಿಸಲು ಎಸ್.ಡಬ್ಲ್ಯೂ.ಡಿ. ಅಧಿಕಾರಿಗಳನ್ನು ಮುಂದಿನ ಸಭೆಗೆ ಕರೆಸುವುದಾಗಿ ತಿಳಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಎಸ್.ಡಬ್ಲ್ಯೂ.ಡಿ. ವಿಭಾಗ |
| 6 | ಮೇದರಹಳ್ಳಿ ಸರ್ಕಾರಿ ಶಾಲೆಯ ಹಿಂಭಾಗ ಒತ್ತುವರಿಯಾಗಿರುವುದಾಗಿ ತಿಳಿಸಿದರು | ಶ್ರೀ ಸೋಮಶೇಖರ್ | ಈ ವಿಷಯವಾಗಿ ಕಂದಾಯ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಲಾಗುವುದು ಎಂದು ತಿಳಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಶೆಟ್ಟಿಹಳ್ಳಿ ಉಪವಿಭಾಗ |
| 7 | ಮೇದರಹಳ್ಳಿ, ಅಬ್ಬಿಗೆರೆ ರಾಜಕಾಲುವೆ ಒತ್ತುವರಿಯಾಗಿರುವುದಾಗಿ ಹೇಳಿದರು | ಶ್ರೀ ಸೋಮಶೇಖರ್ | ಈ ವಿಷಯವಾಗಿ ಚರ್ಚಿಸಲು ಎಸ್.ಡಬ್ಲ್ಯೂ.ಡಿ. ಅಧಿಕಾರಿಗಳನ್ನು ಮುಂದಿನ ಸಭೆಗೆ ಕರೆಸುವುದಾಗಿ ತಿಳಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಎಸ್.ಡಬ್ಲ್ಯೂ.ಡಿ ಉಪವಿಭಾಗ |
| 8 | ಶೆಟ್ಟಿಹಳ್ಳಿ ಪಾರ್ಕ್‌ಗೆ ಗೇಟ್ ಹಾಕಿಸಿ ಕ್ಲೀನಿಂಗ್ ಮಾಡಿಸಿಕೊಡಬೇಕೆಂದು ಕೇಳಿದರು. | ಶ್ರೀಮತಿ ನಾಗವೇಣಿ | ಈ ವಿಷಯವಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸ್ಥಳದಲ್ಲಿಯೇ ತಿಳಿಸಲಾಯಿತು. | ತೋಟಗಾರಿಕೆ ಇಲಾಖೆ ದಾಸರಹಳ್ಳಿ ವಲಯ |
| 9 | ಸುಚಿತ್ರ ಅಪಾರ್ಟ್‌ಮೆಂಟ್ ಹತ್ತಿರ ನಾಯಿಗಳ ಹಾವಳಿ ಹೆಚ್ಚಾಗಿರುವುದಾಗಿ ಹೇಳಿದರು | ಶ್ರೀಮತಿ ನಾಗವೇಣಿ | ಈ ವಿಷಯವಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಲಾಯಿತು. | ಪಶು ಸಂಗೋಪನಾ ಇಲಾಖೆ ದಾಸರಹಳ್ಳಿ ವಲಯ |

**2) ವಾರ್ಡ್ ವ್ಯಾಪ್ತಿಯಲ್ಲಿನ ಘನತ್ಯಾಜ್ಯ ನಿರ್ವಹಣೆ ಬಗ್ಗೆ ಚರ್ಚಿಸುವ ವಿಚಾರ.**

ಘನತ್ಯಾಜ್ಯ ನಿರ್ವಹಣೆ ಬಗ್ಗೆ ಕೂಲಂಕುಷವಾಗಿ ಚರ್ಚಿಸಲಾಗಿ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲು ಹಿರಿಯ ಮತ್ತು ಕಿರಿಯ ಆರೋಗ್ಯ ಪರಿವೀಕ್ಷಕರುಗಳಿಗೆ ಸೂಚಿಸಲಾಯಿತು.

1. ಮನೆ ಮನೆಗಳಿಂದ ಹಾಗೂ ವಾಣಿಜ್ಯ ಸಂಕೀರ್ಣಗಳಿಂದ ಹಸಿಕಸ, ಒಣಕಸ ಮತ್ತು ಸ್ಯಾನಿಟರಿ ತ್ಯಾಜ್ಯಗಳನ್ನು ಬೇರ್ಪಡಿಸಿ ತೆಗೆದುಕೊಳ್ಳುವುದನ್ನು ಪರಿಶೀಲಿಸುವುದು.
2. ತ್ಯಾಜ್ಯ ವಿಂಗಡಿಸದೆ ನೀಡುವುದು ಕಂಡು ಬಂದರೆ ಅಂತಹವರಿಗೆ ದಂಡ ವಿಧಿಸಲು ಸಂಬಂಧಪಟ್ಟ ಆರೋಗ್ಯ ಪರಿವೀಕ್ಷಕರಿಗೆ ಸೂಚನೆ ನೀಡುವುದು.

**3) ವಾರ್ಡ್ ವ್ಯಾಪ್ತಿಯಲ್ಲಿನ ಕಾಮಗಾರಿಗಳು ಮತ್ತು ರಸ್ತೆ ಗುಂಡಿಗಳ ದುರಸ್ಥಿಪಡಿಸುವ ಬಗ್ಗೆ ಚರ್ಚಿಸುವ ವಿಚಾರ.**

1. ಸುಮಾರು 1031 ರಸ್ತೆಗಳಿದ್ದು, ಇದರಲ್ಲಿ ಸುಮಾರು 820 ರಸ್ತೆಗಳನ್ನು ಬಿಡಬ್ಲ್ಯೂಎಸ್‌ಎಸ್‌ಬಿ ವತಿಯಿಂದ ಅಗೆಯಲಾಗಿದ್ದು, ಬಾಕಿ ಇರುವ 211 ರಸ್ತೆಗಳಲ್ಲಿ ಪಾಟ್‌ಹೋಲ್‌ಗಳನ್ನು ಮುಚ್ಚಲು ಅನುವು ಮಾಡಿಕೊಳ್ಳಲಾಗಿರುತ್ತದೆ.
2. ಸದರಿ ವಾರ್ಡ್‌ನ ಮುಖ್ಯರಸ್ತೆಗಳನ್ನು ತುರ್ತಾಗಿ ಸಾರ್ವಜನಿಕರು ಸುಗಮವಾಗಿ ಸಂಚಾರಿಸುವಂತೆ ಕ್ರಮವಹಿಸಲು ವಾರ್ಡ್‌ನ ಎಲ್ಲಾ ಅನುದಾನಗಳನ್ನು ಉಪಯೋಗಿಸಿಕೊಂಡು ಕ್ರಮಕೈಗೊಳ್ಳಲು ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.

**4) ವಾರ್ಡ್ ವ್ಯಾಪ್ತಿಯಲ್ಲಿ ಪ್ರಗತಿಯಲ್ಲಿರುವ ಬಿ.ಡಬ್ಲ್ಯೂ.ಎಸ್.ಎಸ್.ಬಿ ಕಾಮಗಾರಿಗಳಾದ ಕುಡಿಯುವ ನೀರು ಮತ್ತು ಒಳಚರಂಡಿಯ ಬಗ್ಗೆ ಚರ್ಚಿಸುವ ವಿಚಾರ.**

1. ಸದರಿ ವಾರ್ಡ್‌ನಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ.ಯ ಕುಡಿಯುವ ನೀರು ಕಾಮಗಾರಿಯು ಪೂರ್ಣವಾಗಿ ಮುಗಿದಿದ್ದು, ವಾರ್ಡ್‌ನ ಕೆಲವು ಭಾಗಗಳಲ್ಲಿ ಮನೆಗಳ ಸಂಪರ್ಕ ಬಾಕಿ ಇರುತ್ತದೆ.
2. ಸದರಿ ವಾರ್ಡ್‌ನಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ.ಯ ಒಳಚರಂಡಿ ಕಾಮಗಾರಿಯು ಸುಮಾರು 85% ಮುಗಿದಿದ್ದು, ವಾರ್ಡ್‌ನ ಕೆಲವು ಭಾಗಗಳಲ್ಲಿ ಒಳಚರಂಡಿಯ ಮುಖ್ಯ ಪೈಪ್‌ಲೈನ್‌ಗಳನ್ನು ಹಾಕಬೇಕಾಗಿದ್ದು, ಇನ್ನೂ ಬಾಕಿ ಇರುವ ಮ್ಯಾನ್‌ಹೋಲ್‌ಗಳನ್ನು ಅಳವಡಿಸಬೇಕಾಗಿರುತ್ತದೆ ಹಾಗೂ ರಿಸಿವಿಂಗ್ ಚೇಂಬರ್‌ಗಳನ್ನು ಅಳವಡಿಸಿ ಮನೆಗಳಿಗೆ ಸಂಪರ್ಕ ನೀಡುವುದು ಬಾಕಿ ಇರುತ್ತದೆ.

**5) ಹಿಂದಿನ ಸಭೆಯ ನಡವಳಿಗಳಲ್ಲಿದ್ದ ವಿಷಯಕ್ಕೆ ತೆಗೆದುಕೊಂಡ ಕ್ರಮದ ಬಗ್ಗೆ ಓದಿ ರೆಕಾರ್ಡ್ ಮಾಡಿರುವುದು.**

| ಕ್ರ ಸಂ | ವಿಷಯ ಸೂಚಿ | ಚರ್ಚಿಸಿದ ವ್ಯಕ್ತಿಯ ಹೆಸರು ಮತ್ತು ದೂರವಾಣಿ ಸಂಖ್ಯೆ | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|---|
| 1 | ಗೇಟ್‌ಪಾಳ್ಯದ ತೊಂದರೆ ಬಗ್ಗೆ ಮತ್ತೆ ಮತ್ತೆ ತಿಳಿ ಹೇಳಲಾಯಿತು ಮತ್ತು ರೈಲ್ವೇ ಕ್ರಾಸ್ ಬಳಿ ಮೀಡಿಯನ್ ಅಳವಡಿಸಲು ಕೋರಲಾಯಿತು. | ಶ್ರೀಮತಿ ನಾಗವೇಣಿ | ಮೀಡಿಯನ್ ಅಳವಡಿಸಲು ಸಾಧ್ಯವಿಲ್ಲವೆಂದು ಟ್ರಾಫಿಕ್ ಪೋಲೀಸ್ ರವರು ತಿಳಿಸಿದರು. | ಟ್ರಾಫಿಕ್ ಪೋಲೀಸ್ ಠಾಣೆ, ಬಾಗಲಗುಂಟೆ |
| 2 | ಕಲಾ ರಸ್ತೆಯಲ್ಲಿ ಸುಮಾರು 74 ಬೀದಿ ದೀಪಗಳು ಉರಿಯುತ್ತಿಲ್ಲವೆಂದು ದೂರು ನೀಡಿದರು | ಶ್ರೀ ದಯಾಳ್ | ಸಂಬಂಧಪಟ್ಟವರನ್ನು ಕೂಡಲೇ ಸಭೆಗೆ ಕರೆಸಿ ಸರಿಪಡಿಸಲು ನಿರ್ಣಯ ತೆಗೆದುಕೊಳ್ಳಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು ವಿದ್ಯುತ್ ವಿಭಾಗ |
| 3 | ಕೆ.ಜಿ. ಹಳ್ಳಿ 6ನೇ ಅಡ್ಡರಸ್ತೆಗೆ ಪೋಲೀಸ್ ಹಾಕಿಸಿ ಕೊಡಬೇಕೆಂದು ಕೇಳಲಾಯಿತು. | ಶ್ರೀ ದಯಾಳ್ | ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಲಾಯಿತು. | ಪೋಲೀಸ್ ಸಬ್‌ಇನ್ಸ್‌ಪೆಕ್ಟರ್, ಗಂಗಮ್ಮನಗುಡಿ ಪೋಲೀಸ್ ಠಾಣೆ |
| 4 | ಶ್ರೀದೇವಿ ಬಡಾವಣೆಯಲ್ಲಿ ಬೀದಿ ದೀಪಗಳು ಉರಿಯುತ್ತಿಲ್ಲವೆಂದು ದೂರು ನೀಡಲಾಯಿತು | ಶ್ರೀಮತಿ ನಾಗವೇಣಿ | ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಲಾಗಿದೆ. | ಸಹಾಯಕ ಕಾರ್ಯಪಾಲಕ ಅಭಿಯಂತರರು ವಿದ್ಯುತ್ ವಿಭಾಗ |

| | | | | |
|---|---|---|---|---|
| 5 | ನಿಶಾ ಲೇಔಟ್ ಬೋರ್‌ವೆಲ್‌ಗೆ ಮೋಟರ್ ಇಲ್ಲದೇ ಇರುವ ಬಗ್ಗೆ | ಶ್ರೀ ಶೆಟ್ಟಿ | ಟೆಂಡರ್ ಪ್ರಕ್ರಿಯೆಯಲ್ಲಿ ಇರುವುದರಿಂದ ಮುಂದಿನ ದಿನಗಳಲ್ಲಿ ಮೋಟಾರ್ ಅಳವಡಿಸುವುದಾಗಿ ತಿಳಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಶೆಟ್ಟಿಹಳ್ಳಿ ಉಪವಿಭಾಗ |
| 6 | ಚಿಕ್ಕಸಂದ್ರದ ಕೆಲವು ಅಗೆದಿರುವ ರಸ್ತೆಗಳಲ್ಲಿ ವೆಟ್‌ಮಿಕ್ಸ್ ಹಾಕಿಸಿಕೊಡಬೇಕೆಂದು ಕೇಳಲಾಯಿತು. | ಸಾರ್ವಜನಿಕರು | ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಶೆಟ್ಟಿಹಳ್ಳಿ ಉಪವಿಭಾಗ |
| 7 | ಮೇದರಹಳ್ಳಿ ರಾಜಕಾಲುವೆಗೆ ಅಳವಡಿಸಿರುವ ಫೆನ್ಸಿಂಗ್ ಬಿದ್ದು ಹೋಗಿರುವ ಬಗ್ಗೆ | ಶ್ರೀ ಸೋಮಶೇಖರ್ | ಎಸ್.ಡಬ್ಲ್ಯೂ.ಡಿ ಅಧಿಕಾರಿಗಳಿಗೆ ವಿಷಯವನ್ನು ತಿಳಿಸಲಾಗಿದೆ. | ಸಹಾಯಕ ಕಾರ್ಯಪಾಲಕ ಅಭಿಯಂತರರು ಎಸ್.ಡಬ್ಲ್ಯೂ.ಡಿ ಉಪವಿಭಾಗ |
| 8 | ಸುವಿಲಾಸ್ ಅಪಾರ್ಟ್‌ಮೆಂಟ್‌ನ ಡ್ರೈನೇಜ್ ಅನ್ನು ಚೆಕ್ ಮಾಡಿಸಬೇಕೆಂದು ಕೋರಲಾಯಿತು. | ಸಾರ್ವಜನಿಕರು | ಈ ವಾರ ಈ ವಿಷಯದ ಬಗ್ಗೆ ಚೆಕ್ ಮಾಡಲಾಗುವುದು ಎಂದು ತಿಳಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಶೆಟ್ಟಿಹಳ್ಳಿ ಉಪವಿಭಾಗ |
| 9 | ಕಮ್ಮಗೊಂಡನಹಳ್ಳಿಯ ಬ್ರಿಗೇಡ್ ಅಪಾರ್ಟ್‌ಮೆಂಟ್ ಮುಂದಿರುವ ಡ್ರೈನೇಜ್ ಅನ್ನು ಸ್ವಚ್ಛಗೊಳಿಸುವ ಬಗ್ಗೆ | ಸಾರ್ವಜನಿಕರು | ಇದರ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳುವುದಾಗಿ ತಿಳಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಶೆಟ್ಟಿಹಳ್ಳಿ ಉಪವಿಭಾಗ |
| 10 | ಪಾರ್ಕ್‌ಗಳನ್ನು ಸ್ವಚ್ಛಗೊಳಿಸುವ ಬಗ್ಗೆ | ಶ್ರೀಮತಿ ನಾಗವೇಣಿ | ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಲಾಯಿತು. | ತೋಟಗಾರಿಕೆ ಇಲಾಖೆ ದಾಸರಹಳ್ಳಿ ವಲಯ |
| 11 | ಸಹಾಯಕ ಕಂದಾಯ ಅಧಿಕಾರಿ, ಶೆಟ್ಟಿಹಳ್ಳಿ ಉಪವಿಭಾಗ ರವರನ್ನು ಪ್ರತಿ ವಾರ್ಡ್ ಸಮಿತಿ ಸಭೆಗೆ ಹಾಜರಾಗಲು ತಿಳಿಸಬೇಕೆಂದು ಕೋರಲಾಯಿತು. | ವಾರ್ಡ್ ಸಮಿತಿ ಸದಸ್ಯರು | ಸಹಾಯಕ ಕಂದಾಯ ಅಧಿಕಾರಿ, ಶೆಟ್ಟಿಹಳ್ಳಿ ಉಪವಿಭಾಗ ರವರಿಗೆ ಈ ವಿಷಯವನ್ನು ತಿಳಿಸಲಾಯಿತು. | ಸಹಾಯಕ ಕಂದಾಯ ಅಧಿಕಾರಿ, ಶೆಟ್ಟಿಹಳ್ಳಿ ಉಪವಿಭಾಗ |

ಮೇಲ್ಕಂಡ ಎಲ್ಲಾ ಅಂಶಗಳಿಗೂ ಕ್ರಮ ಕೈಗೊಳ್ಳಬೇಕಾದ ಎಲ್ಲಾ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡು ಮುಂದಿನ ಸಭೆಗೆ ಪೂರ್ಣ ಮಾಹಿತಿಯೊಂದಿಗೆ ಎಲ್ಲಾ ಅಧಿಕಾರಿಗಳು ಹಾಜರಾಗಲು ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಸೂಚಿಸಿದರು.

ಮುಂದಿನ ಸಭೆಯಲ್ಲಿ ಸಾಧಿಸಬೇಕಾದ ಗುರಿ ಹಾಗೂ ಸಾಧನೆ ಬಗ್ಗೆ ಚರ್ಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ವಂದನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು

Sd

| | |
|---|---|
| ಸದಸ್ಯ ಕಾರ್ಯದರ್ಶಿ | ವಾರ್ಡ್ ಸಮಿತಿ ಅಧ್ಯಕ್ಷರು |
| ಹಾಗೂ ಸಹಾಯಕ ಅಭಿಯಂತರರು | ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ |
| ವಾರ್ಡ್ ನಂ. 12 ಶೆಟ್ಟಿಹಳ್ಳಿ | ವಾರ್ಡ್ ನಂ. 12 ಶೆಟ್ಟಿಹಳ್ಳಿ |
| ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ |

ಪ್ರತಿಯನ್ನು:

ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರುಗಳ ಮಾಹಿತಿಗಾಗಿ.

1) ಶ್ರೀ ರವಿಕುಮಾರ್, ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿಗಳು, ರವರ ಮಾಹಿತಿಗಾಗಿ ಕಳುಹಿಸಿದೆ.
2) ಶ್ರೀ ಕೆ.ಸಿ. ವೆಂಕಟೇಶ್ (ದೇವೇಗೌಡ್ರು), ಕೆ.ಜಿ.ಹಳ್ಳಿ, ರವರ ಮಾಹಿತಿಗಾಗಿ ಕಳುಹಿಸಿದೆ
3) ಶ್ರೀ ರಾಮಕೃಷ್ಣೇಗೌಡ್ರು , ಎ.ಜಿ.ಬಿ. ಬಡಾವಣೆ, ರವರ ಮಾಹಿತಿಗಾಗಿ ಕಳುಹಿಸಿದೆ
4) ಶ್ರೀ ಕೃಷ್ಣಪ್ಪ, ಅಬ್ಬಿಗೆರೆ, ರವರ ಮಾಹಿತಿಗಾಗಿ ಕಳುಹಿಸಿದೆ
5) ಶ್ರೀ ಕೆಂಪೋಬಳಯ್ಯ, ಶೆಟ್ಟಿಹಳ್ಳಿ, ರವರ ಮಾಹಿತಿಗಾಗಿ ಕಳುಹಿಸಿದೆ
6) ಶ್ರೀಮತಿ ಲಲಿತಮ್ಮ, ಬಾಬಣ್ಣ ಲೇಔಟ್, ರವರ ಮಾಹಿತಿಗಾಗಿ ಕಳುಹಿಸಿದೆ
7) ಶ್ರೀ ರಾಜಣ್ಣ (ಗ್ಯಾಸ್), ಚಿಕ್ಕಸಂದ್ರ, ರವರ ಮಾಹಿತಿಗಾಗಿ ಕಳುಹಿಸಿದೆ.
8) ಶ್ರೀಮತಿ ನಾಗವೇಣಿ, ವಿನಾಯಕ ಲೇಔಟ್, ರವರ ಮಾಹಿತಿಗಾಗಿ ಕಳುಹಿಸಿದೆ.

## ಅಧಿಕಾರಿಗಳ ಮಾಹಿತಿಗಾಗಿ

1) ಮಾನ್ಯ ಜಂಟಿ ಆಯುಕ್ತರು (ದಾಸರಹಳ್ಳಿ) ವಲಯ ರವರ ಅವಗಾಹನೆಗಾಗಿ ಮಂಡಿಸಿದೆ.
2) ಮುಖ್ಯ ಅಭಿಯಂತರರು, (ದಾಸರಹಳ್ಳಿ) ವಲಯ ರವರ ಅವಗಾಹನೆಗಾಗಿ ಮಂಡಿಸಿದೆ.
3) ಉಪ ನಿಯಂತ್ರಕರು (ಹಣಕಾಸು) ದಾ.ವ ರವರ ಮಾಹಿತಿಗಾಗಿ ಕಳುಹಿಸಿದೆ.
4) ಕಾರ್ಯಪಾಲಕ ಅಭಿಯಂತರರು, ದಾ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
5) ಸಹಾಯಕ ಕಾರ್ಯಪಾಲಕ ಅಭಿಯಂತರರು (ಶೆಟ್ಟಿಹಳ್ಳಿ)ರವರ ಮಾಹಿತಿಗಾಗಿ ಕಳುಹಿಸಿದೆ.
6) ಸಹಾಯಕ ಕಂದಾಯ ಅಧಿಕಾರಿ (ಶೆಟ್ಟಿಹಳ್ಳಿ)ರವರ ಮಾಹಿತಿಗಾಗಿ ಕಳುಹಿಸಿದೆ.
7) ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ) ರವರ ಮಾಹಿತಿಗಾಗಿ ಕಳುಹಿಸಿದೆ
8) ಸಹಾಯಕ ಕಾರ್ಯಪಾಲಕ ಅಭಿಯಂತರರು (SWD) ರವರ ಮಾಹಿತಿಗಾಗಿ ಕಳುಹಿಸಿದೆ
9) ಸಹಾಯಕ ಕಾರ್ಯಪಾಲಕ ಅಭಿಯಂತರರು (BWSSB)ರವರ ಮಾಹಿತಿಗಾಗಿ ಕಳುಹಿಸಿದೆ
10) ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ರವರ ಮಾಹಿತಿಗಾಗಿ ಕಳುಹಿಸಿದೆ
11) ಸಹಾಯಕ ಕಾರ್ಯಪಾಲಕ ಅಭಿಯಂತರರು (ಯೋಜನೆ) ರವರ ಮಾಹಿತಿಗಾಗಿ ಕಳುಹಿಸಿದೆ
12) ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ/ಕೆಪಿಟಿಸಿಎಲ್ ಸೋಲದೇವನಹಳ್ಳಿ/ಜಾಲಹಳ್ಳಿ ರವರ ಮಾಹಿತಿಗಾಗಿ ಕಳುಹಿಸಿದೆ
13) ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ಎನ್–5 ಪೀಣ್ಯ ರವರ ಮಾಹಿತಿಗಾಗಿ ಕಳುಹಿಸಿದೆ
14) ಉಪ ತಹಶೀಲ್ದಾರ್ ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ ರವರ ಮಾಹಿತಿಗಾಗಿ ಕಳುಹಿಸಿದೆ.
15) ವಲಯ ಅರಣ್ಯಾಧಿಕಾರಿ ದಾ.ವ ರವರ ಮಾಹಿತಿಗಾಗಿ ಕಳುಹಿಸಿದೆ
16) ಸಹಾಯಕ ನಿರ್ದೇಶಕರು (ನಗರ ಯೋಜನೆ) ದಾ.ವ ರವರ ಮಾಹಿತಿಗಾಗಿ ಕಳುಹಿಸಿದೆ
17) ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೆರೆಗಳು ವಿಭಾಗ) ರವರ ಮಾಹಿತಿಗಾಗಿ ಕಳುಹಿಸಿದೆ
18) ಸಹಾಯಕ ನಿರ್ದೇಶಕರು (ಪಶುಪಾಲನೆ) ರವರ ಮಾಹಿತಿಗಾಗಿ ಕಳುಹಿಸಿದೆ
19) ಕಲ್ಯಾಣಾಧಿಕಾರಿ (ದಾಸರಹಳ್ಳಿ) ವಲಯ ರವರ ಮಾಹಿತಿಗಾಗಿ ಕಳುಹಿಸಿದೆ
20) ತೋಟಗಾರಿಕೆ ಅಧೀಕ್ಷಕರು (ದಾಸರಹಳ್ಳಿ) ವಲಯ ರವರ ಮಾಹಿತಿಗಾಗಿ ಕಳುಹಿಸಿದೆ
21) ಆರೋಗ್ಯಾಧಿಕಾರಿ/ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.12 ರವರ ಮಾಹಿತಿಗಾಗಿ ಕಳುಹಿಸಿದೆ
22) ಪೋಲೀಸ್ ಇನ್ಸ್‌ಪೆಕ್ಟರ್ ಗಂಗಮ್ಮನಗುಡಿ/ಬಾಗಲಗುಂಟೆ/ಸೋಲದೇವನಹಳ್ಳಿ ಪೋಲೀಸ್ ಠಾಣೆ ರವರ ಮಾಹಿತಿಗಾಗಿ ಕಳುಹಿಸಿದೆ
23) ಪೋಲೀಸ್ ಸಬ್ ಇನ್ಸ್‌ಪೆಕ್ಟರ್ (ಸಂಚಾರಿ) ಜಾಲಹಳ್ಳಿ ಪೋಲೀಸ್ ಠಾಣೆ ರವರ ಮಾಹಿತಿಗಾಗಿ ಕಳುಹಿಸಿದೆ
24) ಕಛೇರಿ ಪ್ರತಿ.